


# ಕರ್ನಾಟಕ ಸರಕಾರ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಜಿಲ್ಲಾ ಪಂಚಾಯತ ಧಾರವಾಡ

# ಮಾತು ಕತೆ

ನಮ್ಮ ನಡೆ ಗ್ರಾಮದ ಕಡೆ...

**ಸಂಪುಟ : 01** **ಸಂಚಿಕೆ 04 : ಏಪ್ರೀಲ್ 2023**






ಮಾಸ ಪತ್ರಿಕೆಯ ಪ್ರಕಟಣೆ

ಗ್ರಾಮ ಪಂಚಾಯತ್ ದೇವಲಿಂಗಿಕೊಪ್ಪ

Dharwad Zilla Panchayat    ZPDharwad

## ಅಮೃತ ಸರೋವರ...



ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ 2022-23ನೇ ಸಾಲಿನಲ್ಲಿ ಅಮೃತ ಸರೋವರ ಯೋಜನೆಯಡಿಯಲ್ಲಿ ದೇವಲಿಂಗಿಕೊಪ್ಪ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಬರುವ ಗೌವನ ಕೆರೆ ಆಯ್ಕೆಯಾಗಿದ್ದು. ಈ ಕೆರೆಯು ಸುಮಾರು ವರ್ಷಗಳಿಂದ ಹೂಳು ತುಂಬಿಕೊಂಡಿತ್ತು. ಸದರ ಕೆರೆಯನ್ನು ಧಾನಾ ಆನಂದ ಇಂಡಿಯಾ ಪ್ರೈವೇಟ್ ಲಿಮಿಟೇಡ್ ಕಂಪನಿ, ಜೊಡಳ್ಳಿ ಅವರು ರೂ.9.65 ಲಕ್ಷಗಳ ವೆಚ್ಚದಲ್ಲಿ ಹೂಳು ತೆಗೆದು, ನರೇಗಾ ಯೋಜನೆಯಡಿ ರೂ.18.68 ಲಕ್ಷಗಳ ಅನುದಾನವನ್ನು ಕೆರೆಯ ಕಟ್ಟೆಗೆ ಕಲ್ಲು ಪಿಚ್ಚಿಂಗ್ ಮಾಡಲಾಗಿದೆ. ಇದರಿಂದ ಕೆರೆಯ ಸುತ್ತಮುತ್ತ ಇರುವ ರೈತರ ಬೋರವೆಲ್‌ಗಳು ರಿಚಾರ್ಜ್ ಆಗಿದ್ದು, ಇದರಿಂದ ಜಲಸಂರಕ್ಷಣೆ ಆಗಿದೆ. ಧನ ಕರುಗಳಿಗೆ ಕುಡಿಯುವ ನೀರಿನ ಅನುಕೂಲವಾಗಿದೆ. ಇದು ಒಂದು ಸುಂದರ ಪ್ರವಾಸಿ ಸ್ಥಳವಾಗಿ ಮಾರ್ಪಟ್ಟಿದೆ. ಸಾರ್ವಜನಿಕರಿಗೆ ವಾಯುವಿಹಾರಕ್ಕೆ ಅನುಕೂಲವಾಗುವಂತೆ ಗಿಡಗಳನ್ನು, ವಿಶ್ರಾಂತಿ ಆಸನ ವ್ಯವಸ್ಥೆಯನ್ನು ನಿರ್ಮಾಣ ಮಾಡಲಾಗುತ್ತಿದೆ. 75ನೇ ಅಮೃತ ಮಹೋತ್ಸವದ ಪ್ರಯುಕ್ತ ಸ್ವಾತಂತ್ರ್ಯ ದಿನಾಚರಣೆಯನ್ನು ಕೆರೆಯ ದಂಡೆಯ ಮೇಲೆ ಧ್ವಜಾರೋಹಣ ಮಾಡಿ, ಜನರಲ್ಲಿ ಜಲಸಂರಕ್ಷಣೆಯ, ಜಲ ಮೂಲಗಳ ನೈರ್ಮಲ್ಯ ಕಾಪಾಡುವುದರ ಕುರಿತು ಅರಿವು ಮೂಡಿಸುವುದರೊಂದಿಗೆ ಪ್ರೇರಣೆ ನೀಡಲಾಯಿತು.

**ಶ್ರೀ ಚನ್ನಮಲ್ಲಪ್ಪ ಶಿವಪ್ಪ ಉಳ್ಳಾಗಡ್ಡಿ**
ಪಂಚಾಯತ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತಿ, ದೇವಲಿಂಗಿಕೊಪ್ಪ.

## ಕಾಯಕವೇ ಕೈಲಾಸ ಎಂದರು - "ಬಸವಣ್ಣ" ನರೇಗಾ ನಂಬಿದರೆ ಎಲ್ಲರಿಗೂ "ಉದ್ಯೋಗ-ಅನ್ನ"

ಸರಕಾರ 2005ರಲ್ಲಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉಧ್ಯೋಗ ಖಾತ್ರಿ ಯೋಜನೆಯನ್ನು ಪ್ರಾರಂಭಿಸಿ, ಗ್ರಾಮೀಣ ಭಾಗದ ಜನರಿಗೆ ಅವರುಗಳು ಇದ್ದ ಊರಿನಲ್ಲಿಯೇ ಉದ್ಯೋಗ ನೀಡಿ, ಕೂಲಿಯನ್ನು ನೀಡುತ್ತಿದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಸ್ಮಶಾನ ಅಭಿವೃದ್ಧಿ, ಶಾಲೆಗಳ ಭೋಜನಾಲಯ ಕಟ್ಟಡ, ಅಂಗನವಾಡಿ ಕಟ್ಟಡ, NRLM ವರ್ಕ ಶೆಡ್ಡ್ ಕೆರೆ ಅಭಿವೃದ್ಧಿ, ಬದು ನಿರ್ಮಾಣ, ದನದ ಕೊಟ್ಟಿಗೆ, ಇಂಗುಗುಂಡಿ, ಎರೆಹೂಳು ತೊಟ್ಟಿ, ಆಟದ ಮೈದಾನ ಹಾಗೂ ಗ್ರಾಮೀಣ ಮೂಲಭೂತಸೌಕರ್ಯಗಳನ್ನು ಹೀಗೆ ನರೇಗಾ ಅಡಿಯಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೊಂಡು, ಉದ್ಯೋಗದ ಜೊತೆಗೆ ಆಸ್ತಿಗಳ ನಿರ್ಮಾಣ ರೂಪಿಸಲು ಪರಿಣಾಮ ಬಿರುವಂತೆ ಮಾಡುತ್ತದೆ.

2022-23ನೇ ಸಾಲಿನಲ್ಲಿ 15,052 ಮಾನವದಿನಗಳ ಗುರಿ ನಿಗದಿಪಡಿಸಲಾಗಿತ್ತು.ಆದರೆ 16796 ಮಾನವದಿನಗಳನ್ನು ಸೃಷ್ಟಿಸುವುದರ ಮೂಲಕ ಗುರಿಗೂ ಮೀರಿ ಸಾಧನೆ (ಶೇ.115.58%) ಮಾಡಿದೆ. 2023-24ನೇ ಸಾಲಿನಲ್ಲಿ 18,035 ಮಾನವ ಗುರಿಗಳನ್ನು ನಿಗದಿಪಡಿಸಲಾಗಿದೆ. ಇದರಿಂದ ಬಡಕೂಲಿ ಕಾರ್ಮಿಕರಿಗೆ ಸ್ಥಳೀಯವಾಗಿ ಕೂಲಿ ಕೆಲಸ ಸಿಕ್ಕಂತಾಗಿದೆ ಮತ್ತು ಅವರು ವಲಸೆ ಹೋಗದಂತೆ ತಡೆಯಲಾಗಿದೆ. ಪ್ರಸ್ತುತ ಕೂಲಿಕಾರರು ಗ್ರಾಮ ಪಂಚಾತಿಯ ಸ್ಥಳೀಯ ಉದ್ಯೋಗದಾತ ಎಂದು ನಂಬಿಕೊಂಡಿದ್ದಾರೆ. ಹಳೇಯ ಸ್ಮಶಾನದಲ್ಲಿ ಗಿಡ ಕಂಠಿಗಳು ಬೆಳೆದು ಶವ ಸಂಸ್ಕಾರ

**ಶ್ರೀ ಸುಭಾಸ ತಿ.ಮೇಟಿ**
ಕಾರ್ಯದರ್ಶಿಗಳು
ಗ್ರಾಮ ಪಂಚಾಯತ, ದೇವಲಿಂಗಿಕೊಪ್ಪ



## ಗ್ರಾಮ ಪಂಚಾಯತಿ ಗ್ರಂಥಾಲಯ-ಜ್ಞಾನದ ದೀವಿಗೆ...



ಗ್ರಾಮ ಪಂಚಾಯತ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವು ದೇವಲಿಂಗಿಕೊಪ್ಪ ಗ್ರಾಮದ ಮಧ್ಯದಲ್ಲಿ ಸ್ಥಾಪಿಸಲಾಗಿದೆ. ಗ್ರಾಮದ ಹಿರಿಯರು, ಸಾರ್ವಜನಿಕರು ಮತ್ತು ಮಕ್ಕಳು ಸೇರಿ ಒಟ್ಟು 725 ಜನ ಸದಸ್ಯತ್ವ ಹೊಂದಿದ್ದು, ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಸದರಿ ಕೇಂದ್ರವು ಸುಮಾರು 4,700 ಪುಸ್ತಕಗಳು ಹೊಂದಿದೆ ಜೊತೆಗೆ 1 ಕಂಪ್ಯೂಟರ್ ಮತ್ತು ಅದಕ್ಕೆ ಇಂಟರ್‌ನೆಟ್ ವ್ಯವಸ್ಥೆ ಅಳವಡಿಸಿ, ಗ್ರಂಥಾಲಯವನ್ನು 15ನೇ ಹಣಕಾಸು ಆಯೋಗದ ಅನುದಾನದಡಿ ರೂ. 1,26,000 ವೆಚ್ಚದಲ್ಲಿ ಡಿಜಿಟಲೀಕರಣಗೊಳಸಲಾಗಿದೆ. ಮಕ್ಕಳನ್ನು ಗ್ರಂಥಾಲಯದ ಕಡೆಗೆ ಆಕರ್ಷಿಸಲು, ಅವರಲ್ಲಿ ಕ್ರೀಡಾ ಮನೋಭಾವ ಬೆಳೆಸಲು ಕೇಂದ್ರದಲ್ಲಿ ಚೆಸ್ ಬೋರ್ಡ, ಕೇರಂ ಬೋರ್ಡ ಇತರೆ ಆಟದ ಸಾಮಗ್ರಿಗಳನ್ನು ಖರೀದಿಸಲು ಯೋಜನೆ

**ಶ್ರೀ ಗಂಗರಡ್ಡಿ. ನೂ. ರಡ್ಡೇರ**
ಗಣಕಯಂತ್ರ ನಿರ್ವಾಹಕರು
ಗ್ರಾಮ ಪಂಚಾಯತ, ದೇವಲಿಂಗಿಕೊಪ್ಪ



## ದೇವಲಿಂಗಿಕೊಪ್ಪದ ಮಾತುಕತೆ...



1992ರ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಾಂವಿಧಾನಿಕಗೊಳಿಸಲಾಯಿತು. ಈ ತಿದ್ದುಪಡಿ ಕಾಯಿದೆಯು 1993ರ ಏಪ್ರೀಲ್ 24 ರಂದು ಜಾರಿಗೆ ಬಂದಿತು. ಈ ಐತಿಹಾಸಿಕ ಘಟನೆಯ ಸವಿ ನೆನಪಿಗಾಗಿ ಪ್ರತಿ ವರ್ಷ ಏಪ್ರೀಲ್ 24ನ್ನು ರಾಷ್ಟ್ರೀಯ ಪಂಚಾಯತ್ ರಾಜ್ ದಿವಸವಾಗಿ ಆಚರಿಸಲಾಗುತ್ತಿದೆ. ಕರ್ನಾಟಕದಲ್ಲಿಯೂ ಕೂಡ 3 ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ನೇರ ಚುನಾವಣೆಗಳ ಮೂಲಕ ಜನಪ್ರತಿನಿಧಿಗಳು ಆಯ್ಕೆಯಾಗುತ್ತಿದ್ದು, ಒಟ್ಟು ಸ್ಥಾನಗಳ ಪೈಕಿ ಶೇ 50ರಷ್ಟು ಮಹಿಳೆಯರಿಗೆ ಹಾಗೂ ಶೇ 50 ರಷ್ಟು ದುರ್ಬಲ ವರ್ಗಗಳಿಗೆ ಮೀಸಲಿರಿಸಿದ್ದು, ಆಯ್ಕೆಗೊಂಡವರು ಸ್ಥಳೀಯ ಸರಕಾರದಲ್ಲಿ ಪ್ರಜಾಪ್ರಭುತ್ವದ ತಳಹದಿಯ ಮೇಲೆ ತಮ್ಮ ಗ್ರಾಮಗಳ ಸರ್ವಾಂಗೀಣ ಅಭಿವೃದ್ಧಿಯ ನೇತಾರರಾಗಿ ಗಮನಾರ್ಹವಾದ ಸಾಧನೆಗಳನ್ನು ಮಾಡುತ್ತಿದ್ದಾರೆ. ಕಲಘಟಗಿ ತಾಲೂಕಿನ ದೇವಲಿಂಗಿಕೊಪ್ಪ ಗ್ರಾಮ ಪಂಚಾಯತಿಯು ಜನ ಕಲ್ಯಾಣಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದು, ಅವುಗಳ ವಿಷಯಗಳನ್ನೊಳಗೊಂಡ "ಮಾತುಕತೆ" ಪತ್ರಿಕೆಯ ಈ ಏಪ್ರಿಲ್ ಸಂಚಿಕೆಯ ಮೂಲಕ ಸರ್ವರಿಗೂ ರಾಷ್ಟ್ರೀಯ ಪಂಚಾಯತ್ ರಾಜ್ ದಿವಸದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.



**ಶ್ರೀಮತಿ ಟಿ ಕೆ ಸ್ವರೂಪ** ಐಎಎಸ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ಧಾರವಾಡ

## ಸ್ವಸ್ಥ ಸಮಾಜದ ನಿರ್ಮಾಣಕ್ಕಾಗಿ ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನ...



ಅನಾದಿ ಕಾಲದಿಂದಲೂ ಕ್ರೀಡೆಗಳು ಜಾತಿಯತೆ, ಮೇಲು ಕೀಳು ಎಂಬ ಆಚರಣೆಗಳನ್ನು ಹೊಗಲಾಡಿಸಿ, ಮಾನವನ ಸಂಬಂದಗಳನ್ನು ಜೊಡಿಸುವಲ್ಲಿ ಹಾಗೂ ಸ್ವಸ್ಥ ಸಮಾಜದ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ದೇವಲಿಂಗಿಕೊಪ್ಪ ಗ್ರಾಮ ಪಂಚಾಯತಿ ವತಿಯಿಂದ ಸ್ಥಳಿಯ ಮಕ್ಕಳು ಮತ್ತು ಯುವಕರನ್ನು ಸ್ಪರ್ಧಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಗ್ರಾಮೀಣ ಕ್ರೀಡಾಕೂಟವನ್ನು ಇತ್ತೀಚಿಗೆ ಹಮ್ಮಿಕೊಳ್ಳಲಾಗಿತ್ತು. ಈ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಗ್ರಾಮೀಣ ವಲಯದ ಮಕ್ಕಳ ಮತ್ತು ಯುವಕರ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆಯನ್ನು ಸೃಷ್ಟಿಸಿ, ಅವರಲ್ಲಿ ಅಡಗಿರುವ ಕೌಶಲ್ಯ, ಪ್ರತಿಭೆಗಳನ್ನು ಪ್ರದರ್ಶಿಸುವುದರ ಜೊತೆಗೆ ಸ್ಪರ್ಧಾ ಮನೋಭಾವ ಹೆಚ್ಚಿಸುತ್ತವೆ. ಇದರಿಂದ ಯುವಕರು ದೈಹಿಕ ಹಾಗೂ ಮಾನಸಿಕವಾಗಿ ಸದೃಢತೆಯನ್ನು ಬೆಳೆಸಿಕೊಂಡು, ಸ್ವಸ್ಥ ಮತ್ತು ಸದೃಡ ಸಮಾಜದ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಗ್ರಾಮೀಣ ಭಾಗದ ಯುವ ಸಮೂಹಕ್ಕೆ ಕ್ರೀಡೆಯಲ್ಲಿ ಭಾಗವಹಿಸುವಂತೆ ಮಾಡಲು ಗ್ರಾಮ ಪಂಚಾಯತಿ ಮತ್ತು ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿಗಳ ಸಹಯೋಗದಲ್ಲಿ ದೇವಲಿಂಗಿಕೊಪ್ಪ ಗ್ರಾಮದಲ್ಲಿ ಗ್ರಾಮೀಣ ಕ್ರೀಡಾಕೂಟ ಆಯೋಜಿಸಿ, ಕಬಡ್ಡಿ ಮತ್ತು ವಾಲಿಬಾಲ್ ಕ್ರೀಡೆಗಳಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಮಾಡಿ, ಬಹುಮಾನ ವಿತರಣೆ ಮಾಡಲಾಯಿತು.

**ಶ್ರೀ ಬಸವರಾಜ್ ಹೆಗ್ಗನಾಯಕ**
ಉಪ ಕಾರ್ಯದರ್ಶಿಗಳು
ಜಿಲ್ಲಾ ಪಂಚಾಯತ ಧಾರವಾಡ

## ನಮ್ಮ ಗ್ರಾಮಗಳ ಹಿನ್ನಲೆ ಮತ್ತು ಮುನ್ನಲೆ...



ದೇವಲಿಂಗಿಕೊಪ್ಪ ಗ್ರಾಮ ಪಂಚಾಯತಿಯು ಮೂರು ಗ್ರಾಮಗಳನ್ನು ಹೊಂದಿದ್ದು. ಅವುಗಳು ದೇವಲಿಂಗಿಕೊಪ್ಪ, ದಾಸನೂರ ಮತ್ತು ಜಮ್ಮಿಹಾಳ, ಗ್ರಾಮ ಪಂಚಾಯತಿಯು ಕಲಘಟಗಿ ಪಟ್ಟಣದಿಂದ 23 ಕಿ.ಮೀ ದೂರದಲ್ಲಿದ್ದು, ಧಾರವಾಡ ಮತ್ತು ಹುಬ್ಬಳ್ಳಿ ಶಹರಗಳಿಂದ 16 ಕಿ.ಮೀ ದೂರದಲ್ಲಿರುತ್ತದೆ. ದೇವಲಿಂಗಿಕೊಪ್ಪ ಮತ್ತು ದಾಸನೂರ ಗ್ರಾಮಗಳು ಒಂದಕ್ಕೊಂದು ಹತ್ತಿರ ಇರುವುದರಿಂದ ಆಡುಮಾತಿನಲ್ಲಿ ಜೋಡಳ್ಳಿ ಎಂದು ಕರೆಯುತ್ತಾರೆ

ಈ ಮೊದಲು ಗ್ರಾಮದ ಹೆಸರು ಬಸವಲಿಂಗಿಕೊಪ್ಪ ಅಂತಾ ಇತ್ತು, ಗ್ರಾಮವು ಗುಡ್ಡಗಾಡಿನ ಪಕ್ಕದಲ್ಲಿ ಇದ್ದಿದ್ದರಿಂದ ಜನರು ಕಳ್ಳರ ಹಾವಳಿಯಿಂದ ಆಸ್ತಿ ಪಾಸ್ತಿಗಳು ಮತ್ತು ಪ್ರಾಣಿಗಳ ಹಾವಳಿಯಿಂದ ಕೃಷಿ ಉತ್ಪನ್ನಗಳು ನಷ್ಟವಾಗುತ್ತಿತ್ತು. ಈ ಎಲ್ಲಾ ಸಮಸ್ಯೆಗಳ ಪರಿಹಾರಕ್ಕಾಗಿ ಇಡೀ ಗ್ರಾಮವನ್ನು 01 ಕಿ.ಮೀ ಅ ತರದಲ್ಲಿರುವ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವಾಗ ಗ್ರಾಮದ ಹೆಸರನ್ನು ದೇವಲಿಂಗಿಕೊಪ್ಪ ಅಂತಾ ಹೆಸರು ಬದಲಿಸಲಾಯಿತು.

ದೇವಲಿಂಗಿಕೊಪ್ಪ ಶ್ರೀ ಬಸವೇಶ್ವರ ದೇವಸ್ಥಾನ ಮತ್ತು ಶ್ರೀ ಹೂಲಿ ಅಜ್ಜನ ಮಠ ಪ್ರಮುಖ ಧಾರ್ಮಿಕ ಕೇಂದ್ರಗಳಾಗಿವೆ. ಸುತ್ತಮುತ್ತಲಿನ ಗ್ರಾಮದ ಜನರು, ಭಕ್ತರು ಪ್ರತಿ ವರ್ಷ ನಡೆಯುವ ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಾರೆ. ಶ್ರೀ ಹೂಲಿ ಅಜ್ಜನ ದೇವಸ್ಥಾನದ ಅಡ್ಡ ಪಲ್ಲಕ್ಕಿ ಉತ್ಸವವು ಶ್ರಾವಣ ಮಾಸದ ಕೊನೆಯ ಸೋಮವಾರದಂದು ಶ್ರೀ ಬೂದನಗುಡ್ಡ ದೇವಸ್ಥಾನದವರೆಗೆ ನಡೆಯುತ್ತದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಕ್ತರು ಅತಿ ಉತ್ಸಾಹದಿಂದ ಪಾಲ್ಗೊಳ್ಳುತ್ತಾರೆ. ನಮ್ಮ ಗ್ರಾಮ ಪಂಚಾಯತಿಯ ಸರ್ವಸದಸ್ಯರ, ಸಾರ್ವಜನಿಕರು ಮತ್ತು ಸಿಬ್ಬಂದಿಗಳ ಸಹಕಾರದೊಂದಿಗೆ ಮಾದರಿ ಗ್ರಾಮ ಪಂಚಾಯತಿಯನ್ನಾಗಿ ಮಾಡಿ, ನಗರ ಪ್ರದೇಶದ ಎಲ್ಲಾ ಸೌಲಭ್ಯಗಳನ್ನು ನಮ್ಮ ಗ್ರಾಮ ವಾಸಿಗಳಿಗೆ ಲಭ್ಯವಾಗುವಂತೆ ಮಾಡುವುದು ನಮ್ಮ ಗುರಿಯಾಗಿದೆ.

**ಶ್ರೀಮತಿ. ಅನಸೂಯಾ. ನೀ. ಪಾಟೀಲ**
ಅಧ್ಯಕ್ಷರು
ಗ್ರಾಮ ಪಂಚಾಯತ ದೇವಲಿಂಗಿಕೊಪ್ಪ

## ಶಾಲೆ ನೋಡಿದರೆ ಎನ್ನಲೇಬೇಕು: ಭಲೇ ಭಲೇ..



ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಜೊಡಳ್ಳಿ ಶಾಲೆಗೆ ಸುತ್ತಮುತ್ತಲೂ ಇರುವ ದಾಸನೂರು ಮತ್ತು ದೇವಲಿಂಗಿಕೊಪ್ಪ ಗ್ರಾಮಗಳ ಮಕ್ಕಳು ಬಂದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಶಾಲೆಯನ್ನು ಎತ್ತರದ ಪ್ರದೇಶದಲ್ಲಿ ಕಟ್ಟಿಸಿರುವುದರಿಂದ ಮಕ್ಕಳು ಆಟ ಆಡಲು ಕಷ್ಟವಾಗಿತ್ತು. ಶಾಲೆಯ ಮುಂದಿರುವ ಜಾಗವನ್ನು ಸಮತಟ್ಟಾಗಿ ಮಾಡಿ, ಆಟದ ಮೈದಾನವನ್ನಾಗಿ ಪರಿವರ್ತಿಸಲಾಯಿತು. ದನ ಕರುಗಳ ಹಾವಳಿ ಹಾಗೂ ಶಾಲೆಯ ಜಾಗದ ಸಂರಕ್ಷಣೆ ದೃಷ್ಟಿಯಿಂದ ಮೈದಾನದ ಸುತ್ತಲೂ ಕಂಪೌಂಡ್ ನಿರ್ಮಿಸಲಾಗಿದೆ, ಶಾಲೆಯ ಸೌಂದರ್ಯೀಕರಣ ಹೆಚ್ಚಿಸಲು ಗೋಡೆಯ ಮೇಲೆ ಅಲಂಕಾರಿಕ ಬಣ್ಣ ಹಾಗೂ ಚಿತ್ರಗಳನ್ನು ಚಿತ್ರಿಸಲಾಗಿದೆ. ಈ ಎಲ್ಲಾ ಶಾಲೆಯ ಅಭಿವೃದ್ಧಿಯ ಚಟುವಟಿಕೆಗಳನ್ನು 2022-23ರ ಅಮೃತ ಗ್ರಾಮ ಪಂಚಾಯತಿ ಯೋಜನೆ ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಶಾಲೆಯ ಕಾರ್ಯವೈಖರಿ ಹಾಗೂ ಆಸಕ್ತಿಯನ್ನು ಗುರುತಿಸಿ ಧಾನಾ ಆನಂದ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿಯು ತನ್ನ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಅನುದಾನದಡಿ ರೂ. 15 ಲಕ್ಷಗಳ ವೆಚ್ಚದಲ್ಲಿ ವಿಧ್ಯಾರ್ಥಿ/ವಿಧ್ಯಾರ್ಥಿನಿಯರಿಗೆ ಪ್ರತ್ಯೇಕ ಹೈಟೆಕ್ ಶೌಚಾಲಯ ನಿರ್ಮಿಸಲಾಗಿದೆ. ಕೋಲ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ಕಂಪನಿಯವರ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿ ಅನುದಾನದಡಿ ರೂ. 25 ಲಕ್ಷಗಳ ವೆಚ್ಚದಲ್ಲಿ ಕೊಠಡಿಗಳನ್ನು ನಿರ್ಮಿಸಲಾಗಿದೆ.

**ಶ್ರೀ ಚಂದ್ರು ಪೂಜಾರ**
ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕ ಪಂಚಾಯತ ಕಲಘಟಗಿ

## ಗ್ರಾಮೀಣ ಜನರಿಗೆ ಜಲಜೀವಾಮೃತ...



ಭೂಮಿಯ ಮೇಲೆ ಜೀವಸಂಕುಲ ಸೃಷ್ಟಿಯಾಗಿರುವುದೇ ನೀರಿನ ಮೂಲದಿಂದ. ಭೂಮಿಯ ಮೇಲೆ ಶೇ 70ರಷ್ಟು ನೀರಿದ್ದರೂ ಮಾನವ ಕುಡಿಯುವ ನೀರಿಗಾಗಿ ಬಡಿದಾಡಬೇಕಾದ ಪರಿಸ್ಥಿತಿ ಸೃಷ್ಟಿಯಾಗಿರುವುದು ವಿಪರ್ಯಾಸವೇ ಸರಿ. ಸರಕಾರ ಪ್ರತಿ ಮನೆಗೂ ಶುದ್ದ ಹಾಗೂ ಸುರಕ್ಷಿತ ನೀರನ್ನು ಒದಗಿಸಲು ಜಲ ಜೀವನ ಮಿಷನ್ ಯೋಜನೆಯಡಿ 3 ಗ್ರಾಮಗಳಿಗೂ ರೂ. 212 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿ, ಕಾಮಗಾರಿ ಪ್ರಾರಂಭಿಸಿದೆ. ಈ ಯೋಜನೆಯು ದೇವಲಿಂಗಿಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 946 ಕುಟುಂಬಗಳಿದ್ದು, ಜಮ್ಮಿಹಾಳ ಗ್ರಾಮದಲ್ಲಿರುವ ಎಲ್ಲಾ ಮನೆಗಳಿಗೆ ಕಾರ್ಯಾತ್ಮಕ ನಲ್ಲಿಗಳನ್ನು ಅಳವಡಿಸಿ, ಶುದ್ದ ಮತ್ತು ಸುರಕ್ಷಿತ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಇನ್ನುಳಿದ ದಾಸನೂರ ಹಾಗೂ ದೇವಲಿಂಗಿಕೊಪ್ಪ ಗ್ರಾಮಗಳಲ್ಲಿ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದೆ. ನೀರಿನ ಯೋಗ್ಯ ಬಳಕೆಗಾಗಿ ಪ್ರತಿ ಮನೆಗೂ ಮೀಟರ್‌ನ್ನು ಅಳವಡಿಸಲಾಗಿದೆ. ಅಲ್ಲದೇ ಪ್ರತಿಯೊಂದು ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

**ಶ್ರೀ ಶಿವಪುತ್ರ ಶಿ ಮಠಪತಿ**
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಉಪವಿಭಾಗ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಲಘಟಗಿ

## ಸ್ವಚ್ಛ ಶನಿವಾರ: ಗ್ರಾಮದ ನಡೆ ಸ್ವಚ್ಛತೆ ಕಡೆ...



ಗ್ರಾಮೀಣ ಸಮುದಾಯದಲ್ಲಿ ಸುಸ್ಥಿರ ನೈರ್ಮಲ್ಯ ಮತ್ತು ಶುಚಿತ್ವ ಅಭ್ಯಾಸಗಳನ್ನು ರೂಢಿಸಲು ಘನ ಸರಕಾರದ ನಿರ್ದೇಶನದಂತೆ ಪ್ರತಿ ಮಾಹೆಯ ಪ್ರಥಮ ಶನಿವಾರವನ್ನು " ನಮ್ಮ ಗ್ರಾಮ ಸ್ವಚ್ಛ ಗ್ರಾಮ- ಗ್ರಾಮದ ನಡೆ ಸ್ವಚ್ಛತೆ ಕಡೆ" ಎಂಬ ಘೋಷವಾಕ್ಯದೊಂದಿಗೆ ಶ್ರಮದಾನ ಕಾರ್ಯಕ್ರಮವನ್ನು ದೇವಲಿಂಗಿಕೊಪ್ಪ ಗ್ರಾಮದಲ್ಲಿ ಪ್ರಾರಂಭಿಸಿ, ಇನ್ನುಳಿದ ಗ್ರಾಮಗಳಿಗೆ ವಿಸ್ತರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳೆಯರು ನೈರ್ಮಲ್ಯದ ಕುರಿತು ಹಾಡುವುದರ ಮೂಲಕ ಅರಿವು ಮೂಡಿಸಿದರು, ಸ್ವಚ್ಛತಾ ಪ್ರತಿಜ್ಞೆ ಮಾಡಿಸಲಾಯಿತು, ಶೌಚಾಲಯ ಬಳಕೆ, ಪ್ಲಾಸ್ಟಿಕ್ ನಿಷೇದ, ಸಮರ್ಪಕ ಕಸ ವಿಲೇವಾರಿ ಎಲ್ಲೆಂದರಲ್ಲಿ ಉಗುಳುವುದನ್ನು ಕಡಿಮೆ ಮಾಡುವುದು ಹೀಗೆ ಸಾರ್ವಜನಿಕ ಸ್ಥಳಗಳನ್ನು ಸಾರ್ವಜನಿಕರು, ಜನಪ್ರತಿನಿಧಿಗಳು, ಸ್ಥಳೀಯ ಅಧಿಕಾರಿಗಳು ಹಾಗೂ ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರು ಸೇರಿಕೊಂಡು ಜಾಥಾ, ಮನೆ ಮನೆಗೆ ಭೇಟಿ ಮಾಡುವುದರ ಮೂಲಕ ಅರಿವು ಮೂಡಿಸಲಾಯಿತು.

**ಶ್ರೀ ಹಣಮಂತಗೌಡ ಪಾಟೀಲ**
ಜಿಲ್ಲಾ HRD ಸಂಯೋಜಕರು
ಸ್ವಚ್ಛ ಭಾರತ ಮಿಷನ್(ಗ್ರಾ) ಜಿ.ಪಂ.ಧಾರವಾಡ





## ಸ್ವಚ್ಛ ಸುಂದರ ಗ್ರಾಮಕ್ಕೊಂದು ಸ್ವಚ್ಛ ಸಂಕೀರ್ಣ ಘಟಕ...



ಸ್ವಚ್ಛ ಭಾರತ ಮಿಷನ್(ಗ್ರಾ) ಯೋಜನೆಯಡಿ ದೇವಲಿಂಗಿಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರತಿ ಮನೆಗೂ ಹಸಿ ಮತ್ತು ಒಣ ಕಸ ಸಂಗ್ರಹಣೆಗಾಗಿ 15ನೇ ಹಣಕಾಸು ಆಯೋಗ ಅನುದಾನ ರೂ. 2.20 ಲಕ್ಷಗಳ ವೆಚ್ಚದಲ್ಲಿ ಕಸದ ಬುಟ್ಟಿಗಳನ್ನು, ಸಂಗ್ರಹಿಸಿದ ಕಸವನ್ನು ಸಾಗಿಸಲು 15ನೇ ಹಣಕಾಸು ಆಯೋಗ ಮತ್ತು ಸ್ವಚ್ಛ ಭಾರತ ಮಿಷನ್(ಗ್ರಾ) ಯೋಜನೆಗಳ ಒಗ್ಗೂಡಿಸುವಿಕೆಯ ಅನುದಾನ ರೂ. 5.60 ಲಕ್ಷಗಳ ವೆಚ್ಚದಲ್ಲಿ ನಾಲ್ಕು ಚಕ್ರದ (TATA ACE GOLD) ವಾಹನ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ರೂ. 12 ಲಕ್ಷಗಳ ವೆಚ್ಚದಲ್ಲಿ ಸ್ವಚ್ಛ ಸಂಕೀರ್ಣ ಘನ ತ್ಯಾಜ್ಯ ಸಂಪನ್ಮೂಲ ನಿರ್ವಹಣಾ ಘಟಕವನ್ನು ನಿರ್ಮಿಸಿ, ಅದರಲ್ಲಿ ಒಣ ಕಸವನ್ನು ವಿಂಗಡಿಸಿ, ಹಸಿ ಕಸವನ್ನು ಎರೆಹುಳು ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತಿದೆ.

ಮಹಿಳೆಯರ ಸಬಲೀಕರಣಕ ದೃಷ್ಟಿಯಿಂದ ಸರಕಾರ ಗ್ರಾಮ ಪಂಚಾಯತಿ ಮಟ್ಟದ ಸಂಜೀವಿನಿ ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಸ್ವ ಸಹಾಯ ಸಂಘದ 3 ಮಹಿಳೆಯರಾದ ಶ್ರೀಮತಿ ಮಲ್ಲಮ್ಮ ಮ. ಶಿರಗುಪ್ಪಿ, ಶ್ರೀಮತಿ ಮಂಜುಳಾ ನಾ. ದೊಡ್ಡಮನಿ ಮತ್ತು ಶ್ರೀಮತಿ ಅಂಬಿಕಾ ಲ. ಸಣ್ಣಮನಿ ರವರಿಗೆ ಸರಕಾರದಿಂದ ಉಚಿತವಾಗಿ ತ್ಯಾಜ್ಯ ನಿರ್ವಹಣೆ ಕುರಿತು ತರಬೇತಿ

**ಶ್ರೀ ಮಹಮದ್‌ಯಾಶಿರ್ ಶರಬತವಾಲಾ**
ತಾಂತ್ರಿಕ ಸಹಾಯಕರು, ಮ.ಗಾ.ರಾ.ಗ್ರಾ.ಉ.ಖಾ
ತಾಲೂಕು ಪಂಚಾಯತ, ಕಲಘಟಗಿ

## ಮಹಿಳೆಯರ ಸಬಲೀಕರಣದ ಅಸ್ತ್ರ ಸಂಜೀವಿನಿ...

ದೇವಲಿಂಗಿಕೊಪ್ಪ ಗ್ರಾಮ ಪಂಚಾಯತಿಯಲ್ಲಿ 506 ಬಡ ಕುಟುಂಬದ ಮಹಿಳೆಯರು ಸೇರಿಕೊಂಡು 40 ಸ್ವ-ಸಹಾಯ ಸಂಘಗಳ ಮೂಲಕ ಒಕ್ಕೂಟ ರಚಿಸಿಕೊಂಡಿರುತ್ತಾರೆ. ಒಕ್ಕೂಟದ ನಿಯಮಾವಳಿಗಳ ಪ್ರಕಾರ ತಮ್ಮದೇ ಆದ ಕಾರ್ಯಕಾರಿ ಸಮಿತಿಯ ಕಾರ್ಯ ಕಲಾಪಗಳನ್ನು ನಡೆಸುತ್ತಿದ್ದಾರೆ. ಈಗಾಗಲೇ ಸಂಜೀವಿನಿ ಯೋಜನೆಯಿಂದ ಒಕ್ಕೂಟಕ್ಕೆ 11.50 ಲಕ್ಷಗಳ ಸಮುದಾಯ ಬಂಡವಾಳ ನಿಧಿ ನೀಡಲಾಗಿದೆ. ಸದರಿ ಒಕ್ಕೂಟದ ಸದಸ್ಯತ್ವ ಪಡೆದ ಮಹಿಳೆಯರು ಸಮುದಾಯ ಬಂಡವಾಳ ನಿಧಿಯಿಂದ ಸಾಲ ಪಡೆದು ನರ್ಸರಿ, ಅರಿಶಿಣ ಬೇಸಾಯ, ಹೈನುಗಾರಿಗೆ, ಹೂವಿನ ಕೃಷಿ ಮುಂತಾದ ಸ್ವ-ಉದ್ಯೋಗ ಕೈಗೊಂಡು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ. ಸಾಮಾಜಿಕವಾಗಿ ಮುಖ್ಯ ವಾಹಿನಿಯತ್ತ ದಾಪುಗಾಲು ಹಾಕುತ್ತಿದ್ದಾರೆ. ಈ ಎಲ್ಲಾ ಯಶಸ್ಸಿನ ಹಿಂದೆ ತರಬೇತಿ ಪಡೆದ ಕೃಷಿ ಸಖಿ ಮತ್ತು ಪಶು ಸಖಿರವರು ಮಾರ್ಗದರ್ಶಕರಂತೆ ಕಾರ್ಯನಿರ್ವಹಿಸುತ್ತಿರುವುದು. ಮಹಿಳೆಯರಿಗೆ ಸಂತೋಷದ ಸಂಗತಿ, ಸದರಿ ಒಕ್ಕೂಟದ ವತಿಯಿಂದ ಪ್ರತಿ ತಿಂಗಳ ಮಾಸಿಕ ಸಂತೆ ಆಯೋಜಿಸಿ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಮಾಡಲಾಗುತ್ತಿದೆ. ಮಹಿಳೆಯರ ಅಭಿಪ್ರಾಯದಲ್ಲಿ ಸಂಜೀವಿನಿ ಯೋಜನೆ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಅಸ್ತ್ರವಾಗಿದೆ.

**ಶ್ರೀ ವಿನೋದ ಕಂಠಿ**
ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು NRLM
ಜಿಲ್ಲಾ ಪಂಚಾಯತ ಧಾರವಾಡ







## ಮತದಾರ ಪ್ರಭುಗಳಲ್ಲಿ ಮನವಿ..




ಕರ್ನಾಟಕ ವಿಧಾನ ಸಭಾ ಚುನಾವಣೆಯು ಘೋಷಣೆಯಾಗಿದ್ದು ಇದೇ ಮೇ 10 ರಂದು ಮತದಾನ ದಿನವಾಗಿದೆ. ದೇವಲಿಂಗಿಕೊಪ್ಪ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ದೇವಲಿಂಗಿಕೊಪ್ಪ ದಾಸನೂರು ಮತ್ತು ಜಮ್ಮಿಹಾಳ ಹೀಗೆ 3 ಗ್ರಾಮಗಳು ಇದ್ದು ಒಟ್ಟು 4 ಮತದಾನ ಕೇಂದ್ರಗಳಿವೆ. ಕಳೆದ ವಿಧಾನ ಸಭಾ ಚುನಾವಣೆಯು 2018 ರಲ್ಲಿ ಜರುಗಿದ್ದು, ಅದರಲ್ಲಿ ಶೇ 86.14 ರಷ್ಟು ಮತದಾನವಾಗಿದೆ. ಮತದಾರರ ಪಟ್ಟಿಯಲ್ಲಿ ಇರುವ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಿದಾಗ ಮಾತ್ರ ಯೋಗ್ಯ ಜನಪ್ರತಿನಿಧಿಯನ್ನು ಮತ್ತು ಯೋಗ್ಯ ಸರಕಾರವನ್ನು ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ, ಈ ಚುನಾವಣೆಯಲ್ಲಿ ನಮ್ಮ ಗ್ರಾಮಗಳ ಮತದಾರರು ತಪ್ಪದೇ ಮತದಾನ ಮಾಡಬೇಕು ಮತ್ತು ವಿವಿಧ ಕಾರಣಗಳಿಂದ ಗ್ರಾಮದಿಂದ ಹೊರಗಿರುವವರನ್ನು ಅಂದು ಮತದಾನಕ್ಕೆ ಬರಲು ಪ್ರೇರೇಪಿಸಿ ಶೇ 100 ರಷ್ಟು ಮತದಾನ ಅಗುವಂತೆ ಮಾಡಲು ಮತ್ತು ದಾಖಲೆ ನಿರ್ಮಿಸಲು ವಿನಂತಿಸುತ್ತೇನೆ.

**ಶ್ರೀ ಬಿ. ಎಸ್. ಮೂಗನೂರಮಠ**
ಯೋಜನಾ ನಿದೇಶಕರು
ಜಿಲ್ಲಾ ಪಂಚಾಯತ್ ಧಾರವಾಡ